that the appointments have not been made. As regards private institutions, they have a separate proposal for sanction of posts but in Government schools, the Government has not taken any step to create posts particularly in Haji Mohammad Sultan School. Bidar and in Al Ameen Bidar. Their applications are pending.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು, ೨ ಶಾಲೆಗಳಿಗೆ ಉಪಾಧ್ಯಾಯರ ಕೊರತೆ ಇದೆ ಎಂದು ಹೇಳಿದ್ದಾರೆ. ಆ ಎರಡೂ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಿಂವುದಕ್ಕೆ ಏರ್ಪಾಡು ಮಾಡುತ್ತೇನೆ. ಇನ್ನು ಅನುದಾನ ಪಡೆಯುವ ಹೈಸ್ಕೂಲ್ಸ್ ಏನು ಇವೆ ಅವರು ಉಪಾಧ್ಯಾಯರುಗಳನ್ನು, ಭರ್ತಿ ಮಾಡಿಕೊಂಡಿದ್ದಾರೆ. ಸ್ವಾವಿ, ಸರ್ಕಾರೀ ಆಜ್ಞೆ ಪ್ರಕಾರ ಯಾರನ್ನೂ ಸಹ ನೇಮಕ ಮಾಡಕೂಡದಂ. ಅಲ್ಲದ ಈ ಸಂದರ್ಭದಲ್ಲಿ ಆ ಬಗ್ಗೆ ಯಾರಿಗೂ ಸಹ ಪರವಾನಗಿ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಹರಿಹರ ತಾಲ್ಲೂಕಿನಲ್ಲಿ ಭತ್ತದ ಬೆಳೆಗಳಿಗಂಟಿದ ಹಾನಿ.

೧೫೫೨. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಹರ ತಾಲ್ಲೂಕಿನಲ್ಲಿರುವ ಗ್ರಾಮಂಗಳಲ್ಲಿ ಭತ್ತದ ಬೆಳೆ ರೋಗದಿಂದ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗ ಮಳೆ ಬಿದ್ದಿರುವುದರಿಂದ, ರೈತರಿಗೆ ಭತ್ತದ ಬೀಜ ಮತ್ತು ಗೊಬ್ಬರ ಕೊಳ್ಳಲು ಸರ್ಕಾರದವರು ಸಾಲ ಒದಗಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು). —

ಅ) ಬಂದಿದೆ. ಭತ್ತದ ಬೆಳೆಯು ಕಂದು ಜಿಗಿ ಹುಳುವಿನ ಭಾದೆಯಿಂದ ನಷ್ಟಕ್ಕೊಳಗಾಗಿದೆ.

ಆ) ಸಹಕಾರ ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮೂಲಕ ಅರ್ಹರಾದ ರೈತರಿಗೆ ಅಲ್ಪಾವಧಿ ಬೆಳೆ ಸಾಲಗಳನ್ನು ಕೊಡುವ ವ್ಯವಸ್ಥೆ ಇದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಅಧ್ಯಕ್ಷರೇ, ಈ ಒಂದು ರೋಗದಿಂದ ಬೆಳೆ ನಾಶವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದ್ದು ಬ್ಯಾಂಕ್ ಮುಖೇನ ಸಾಲ ಕೊಡಿಸತಕ್ಕ ಏರ್ಪಾಡನ್ನು ಸರ್ಕಾರ ಮಾಡಿದೆ. ಆದರೆ ಸರ್ಕಾರದ ಸಹಕಾರಿ ಸಂಸ್ಥೆಗಳಿಂದ ಮಧ್ಯಮಾವಧಿ ಸಾಲ ಸಿಗುವ ವ್ಯವಸ್ಥೆಯನ್ನು ಸರ್ಕಾರ ಇನ್ನೂ ಮಾಡಿರುವುದಿಲ್ಲ. ಇದರಿಂದಾಗಿ ಆಲ್ಲಿನ ರೈತರು ನಮ್ಮ ಮೇಲೆ ಬೀಳುತ್ತಿದ್ದಾರೆ. ಆದ್ದರಿಂದ ಜಾಗ್ರತೆ ಸರ್ಕಾರದಿಂದ ಸಾಲ ಅವರಿಗೆ ಸಿಗುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಸುಮಾರು ೭ ಸಾವಿರ ಎಕರೆಯಲ್ಲಿ ಕಂದು ಜಿಗಿ ಹುಳುವಿನ ಭಾದೆಯಿಂದ ಬೆಳೆ ನಷ್ಟಕೊಳಗಾಗಿದ್ದು ಸುಮಾರು ೫ ಲಕ್ಷ ೪೦ ಸಾವಿರ ರೂ ಗಳ ಒಂದು ಯೋಜನೆಯಿಂದ ಇದನ್ನು ಹತೋಟಿ ತರುವ ಕೆಲಸ ಮಾಡಲಾಗಿದೆ. ಹಾಗೂ ಅಲ್ಲಿನ ವಾಣಿಜ್ಯ ಬ್ಯಾಂಕ್‌ಗಳು ಅಲ್ಪಕಾಲಾವಧಿ ಸಾಲವನ್ನು ಮಧ್ಯಮಾವಧಿ ಸಾಲವೆಂದು ಪರಿಗಣಿಸತಕ್ಕದ್ದರ ಬಗ್ಗೆ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಸೇವಾ ಸಹಕಾರ ಸಂಘಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀವ್ರ ಪರಿಶೀಲನೆ ನಡೆದಿದೆ. ನೀರಿನ ತೆರಿಗೆಯನ್ನು ಮಾಫು ಮಾಡತಕ್ಕದ್ದು, ಕಂದಾಯ ಬಾಕಿಯನ್ನು ಮಾಫಿ ಮಾಡತಕ್ಕದ್ದು ಮತ್ತು ಸಹಕಾರಿ ಸಂಘಗಳ ಮೂಲಕ ಕೊಟ್ಟಿರತಕ್ಕ ಸಾಲವನ್ನು ಮಧ್ಯಮಾವಧಿ ಸಾಲವೆಂದು ಪರಿಗಣಿಸುವುದು ಈ ಮೂರು ವಿಷಯಗಳ ಬಗ್ಗೆ ೩ ಆಜ್ಞೆಗಳೊಡನೆ ಚರ್ಚೆಮಾಡುತ್ತಿರುವುದರಿಂದ ಇನ್ನು ಒಂದು ವಾರ ಅಥವಾ ೧೫ ದಿವಸಗಳಲ್ಲಿ ಈ ಬಗ್ಗೆ ನಮ್ಮ ನಿರ್ಧಾರವನ್ನು ಪ್ರಕಟ ಮಾಡುತ್ತೇವೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಇವತ್ತು ಆ ಜನಕ್ಕೆ ಬೀಜ ಮತ್ತು ಗೊಬ್ಬರ ಅವಶ್ಯಕವಾಗಿ ಬೇಕಾಗಿದೆ. ಇವತ್ತು ಅತನಿಗೆ ಭತ್ತ ನಷ್ಟವಾಗಿದ್ದು, ಸಾಲ ಸಿಗದಿದ್ದರೆ, ಆತನಿಗೆ ಫಾನಲ್ ಮೂಲಕ ನೀರು ಬಿಟ್ಟು ಏನು ಪ್ರಯೋಜನ? ಆದ್ದರಿಂದ ೧೫ ದಿವಸಗಳ ಬದಲಾಗಿ ಇನ್ನು ೪-೫ ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಮಾಡಿ. ಎಲ್ಲಾ ರೆಕಾರ್ಡ್ಸ್ ಸರ್ಕಾರದ ಮುಂದೆ ಇದೆ.

ಶ್ರೀ ಎಂ. ಪಿ. ಪ್ರಕಾಶ್.--ಈಗಾಗಲೇ ವಾಣಿಜ್ಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳ ಮೂಲಕ ಸಾಲ ಕೊಡತಕ್ಕ ವಿಷ್ಯಾಡು ಮಾಡಿದ್ದೇವೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂದು ಜಿಗಿ ಹಂಳುವಿನ ರೋಗ ಕಾಣಿಸಿಕೊಂಡಿತ್ತು. ಆದು ಕಾಣಿಸಿಕೊಂಡ ಪ್ರದೇಶದ ಶಾಸಕರನ್ನು ಕರೆದು ಅವರುಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆದಿದ್ದೆವು. ಈಗಾಗಲೇ ಬ್ಯಾಂಕುಗಳ ಮೂಲಕ ಸಾಲಗಳು ಮಂಜೂರಾಗಿದ್ದು, ಇನ್ನು ಸೇವಾ ಸಹಕಾರ ಸಂಘಗಳ ಮೂಲಕ ಆಗುವುದರ ಬಗ್ಗೆ ಸ್ವಲ್ಪ ತಡವಾಗಿದೆ. ಈ ಬಗ್ಗೆ ಇನ್ನು ೧೦-೧೫ ದಿವಸಗಳಲ್ಲಿ ಕಾರ್ಯಕ್ರಮ ಹಾಕಂತ್ತೇವೆಂದು ಮತ್ತೊಮ್ಮೆ ಹೇಳುತ್ತೇನೆ.

ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು.

೧೧೭೯. ಶ್ರೀ ಡಿ. ಎ. ಚಿನ್ನಪ್ಪ (ಮಾಡಕೇರಿ) ಹಾಗೂ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.--

ಅ) ಸರ್ಕಾರಿ ಆದೇಶದ ಸಂಖ್ಯೆ ಇ.ಡಿ. ೧೧೯ ಪಿ.ಪಿ.ಯು ೭೩, ದಿನಾಂಕ ೨೮-೮-೧೯೭೪ರ ಪ್ರಕಾರ ಕರ್ನಾಟಕ ರಾಜ್ಯದ ವಿವಿಧ ಪ್ರೌಢಶಾಲೆಗಳಲ್ಲಿ ಸೇವೆಸಲ್ಲಿಸುತ್ತಿರುವ ಸ್ನಾತಕೋತ್ತರ ಪದವಿ ಪಡೆದಿರುವ ಪ್ರೌಢಶಾಲಾ ಸಹಾಯಕ ಶಿಕ್ಷಕರಿಗೆ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಲ್ಲಿ ಶೇಕಡ ೫೦ರಷ್ಟು ಹುದ್ದೆಗಳನ್ನು ಮೀಸಲಿಟ್ಟಿರುವುದು ನಿಜವೆ?

ಆ) ಹಾಗಿದ್ದಲ್ಲಿ, ಇದರ ಪ್ರಕಾರ ಎಷ್ಟು ಶಿಕ್ಷಕರಿಗೆ ಕಿರಿಯ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಬಡ್ತಿ ನೀಡಲಾಗಿದೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).--

ಅ) ಹೌದು. ತರುವಾಯ ಸರ್ಕಾರದ ಆಜ್ಞೆಯನ್ನು ರದ್ದುಪಡಿಸಿ ಉಪಬಂಧವನ್ನು ಉಳಿಸಿಕೊಂಡು ದರ್ಜೆ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಿದೆ.

ಆ) ಇಲ್ಲಿ.

ಶ್ರೀ ಡಿ. ಎ. ಚಿನ್ನಪ್ಪ.--ಅಧ್ಯಕ್ಷರೇ, ೧೯೮೪ರಲ್ಲಿ ಕೆಲವು ಶಿಕ್ಷಕರ ೫ ವರ್ಷಗಳ ಗುಪ್ತವರದಿಯನ್ನು ತರಿಸಿಕೊಂಡಿದ್ದಾರೆ. ಎಂದು ತಿಳಿದು ಬಂದಿದೆ ಅದು ಏನೆಂದು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ?

ಶ್ರೀ ಎಂ. ರಘುಪತಿ.--ಅದು ಗುಪ್ತ ವರದಿಯಾದ ಮೇಲೆ ಅದನ್ನು ಸಭೆಯ ಮುಂದಿಡುವುದ ಕ್ಕಾಗುವುದಿಲ್ಲ.

ಕಾಲೇಜು ಉಪನ್ಯಾಸಕರುಗಳಿಗೆ ಕಾಲಮಿತಿ ಬಡ್ತಿ.

೧೨೦೭. ಶ್ರೀ ಚಂದ್ರಶೇಖರ್ (ಗೌರಿಬಿದನೂರು).--ಮಾನ್ಯ ಶಿಕ್ಷಣ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಕಾಲೇಜು ಅಧ್ಯಾಪಕರ ಕಾಲಮಿತಿ ಬಡ್ತಿಯ ಬಗ್ಗೆ ಸರ್ಕಾರಿ ಆಜ್ಞೆ ಹೊರಬಿದ್ದಿದೆಯೇ?

ಆ) ಆ ಆಜ್ಞೆಯಲ್ಲಿ ಪಾಸ್ ಕ್ಲಾಸ್ ಅಧ್ಯಾಪಕರ ಬಡ್ತಿಯ ಬಗ್ಗೆಯೂ ಸೇರಿಸಲ್ಪಟ್ಟಿದೆಯೇ?

ಇ) ಪಾಸ್ ಕ್ಲಾಸ್ ಅಧ್ಯಾಪಕರಿಗೆ ಅವರ ಸೇವಾವಧಿಯಲ್ಲಿ ಒಂದು ಬಡ್ತಿಗೆ ಅರ್ಹರಾಗುತ್ತಾರೆಂಬ ಸಚಿವ ಸಂಪುಟದ ನಿರ್ಧಾರವಾದ ಮೇಲೂ ಸರ್ಕಾರಿ ಆಜ್ಞೆಯಾಗುವುದಕ್ಕೆ ಇಷ್ಟು ವಿಳಂಬವೇಕೆ

ಈ) ಸರ್ಕಾರಿ ಆಜ್ಞೆಯಲ್ಲಿ ಸ್ನಾತಕೋತ್ತರ ಪದವಿ ಹೊಂದಿರುವವರಿಗೆ ೧೦ ವರ್ಷದ ನಂತರ ಬಡ್ತಿ ಹಾಗೂ ಇತರರಿಗೆ ೧೫ ವರ್ಷದ ನಂತರ ಬಡ್ತಿ ಎಂದು ನಮೂದಿಸಲಾಗಿತ್ತೆ ಎಂಬುದು ನಿಜವೇ? ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಯವರು).--

ಅ) ಯೂನಿವರ್ಸಿಟಿ ಕಾಲೇಜ್ ಟೀಚರ್ಸ್ ಅಸೋಸಿಯೇಷನ್ ಮತ್ತು ಕಾಲೇಜ್ ಟೀಚರ್ಸ್ ಅಸೋಸಿಯೇಷನ್‌ಗಳ ಮನವಿ ಪತ್ರದ ಮೇರೆಗೆ ಸರ್ಕಾರವು ಕೆಳಗಿನ ನಿಂದಭಸೆಗೊಳಪಟ್ಟು ಉಪನ್ಯಾಸಕರಿಗೆ ರೀಡರ್‌ಗಳಾಗಿ ಕಾಲಮಿತಿ ಬಡ್ತಿ ಕೊಡಲು ತೀರ್ಮಾನಿಸಿತ್ತು.